# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 259
ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 06.12.2023
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪರಿಶಿಷ್ಟ ಜನಾಂಗದವರಿಗೆ ಇಲ್ಲಿಯವರೆಗೆ ಯಾವ ರೀತಿಯಲ್ಲಿ ಸರ್ಕಾರ ಜಮೀನು ಹಂಚಿಕೆ ಮಾಡಿದೆ; (ಸಂಪೂರ್ಣ ವಿವರ ಒದಗಿಸುವುದು) | ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಮಾಡುತ್ತಿರುವ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94, 94ಬಿ ಹಾಗೂ 94ಎ(4)ರಡಿ ಕ್ರಮವಾಗಿ ನಮೂನೆ 50, 53 ಹಾಗೂ 57ರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ, ಸ್ವೀಕರಿಸಿರುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಅರ್ಹ ಅರ್ಜಿಗಳನ್ನು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಮಂಡಿಸಲಾಗುತ್ತಿದೆ. ಅದರಂತೆ ಮಂಜೂರಾಗಿರುವ ಪ್ರಕರಣಗಳಲ್ಲಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108ಜಿ ರಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೊಬಗಲನ್ನು ಸಂದಾಯ ಮಾಡಲು ವಿನಾಯಿತಿ ನೀಡಲಾಗಿದೆ. ಸಾಗುವಳಿ ಚೀಟಿ ನೀಡುವಾಗ ಸದರಿ ಜಮೀನನ್ನು 25 ವರ್ಷಗಳ ವರೆಗೆ ಮಾರಾಟ ಮಾಡಬಾರದೆಂಬ ಷರತನ್ನು ವಿಧಿಸಲಾಗುತ್ತಿದೆ.<br><br>ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಸರ್ಕಾರವು ಮಂಜೂರು ಮಾಡಿರುವ ಭೂಮಿಗಳನ್ನು ಸದರಿ ವರ್ಗದವರ ಮುಗ್ಧತೆ, ಬಡತನ ಮತ್ತು ಮೌಢ್ಯವನ್ನು ಬಲಿಷ್ಠ ವ್ಯಕ್ತಿಗಳು ದುರುಪಯೋಗಪಡಿಸಿಕೊಂಡು, ಸಾಮಾನ್ಯ ದರಕ್ಕಾಗಲೀ ಅಥವಾ ಯಾವುದೇ ದರ ರಹಿತವಾಗಿ ಮಾರಾಟ ಅಥವಾ ಅಡಮಾನ ಮಾಡಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಮಂಜೂರಾತಿಯ ಉದ್ದೇಶವನ್ನು ಪೂರ್ಣಗೊಳಿಸುವ ಸಲುವಾಗಿ, ಅಂತಹ ಭೂಮಿಯು ಸರ್ಕಾರದಿಂದ ಪೂರ್ವಾನುಮತಿ ಪಡೆಯದೇ ಪರಭಾರೆಯಾಗಿದ್ದಾಗ್ಯೂ ಸಹ, ಅದನ್ನು ಮೂಲ ಮಂಜೂರಾತಿದಾರನಿಗಾಗಲೀ ಅಥವಾ ಆತನ ಉತ್ತರಾಧಿಕಾರಿಗಳಿಗಾಗಲಿ ಪುನರ್ ಸ್ಥಾಪಿಸಬೇಕು ಎಂಬ ಉದ್ದೇಶದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವ್ಯಕ್ತಿಗಳಿಗೆ ಸರ್ಕಾರದಿಂದ ಮಂಜೂರಾದ ಭೂಮಿಯನ್ನು ಸರ್ಕಾರದ ಪೂರ್ವಾನುಮತಿ ಇಲ್ಲದೇ, ಪರಭಾರೆ ಮಾಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಭೂಮಿಗಳ ಪರಭಾರೆ ನಿಷೇಧ) ಅಧಿನಿಯಮ, 1978 ನ್ನು ಜಾರಿಗೆ ತರಲಾಗಿದೆ.<br><br>ಆದರೆ ಜಮೀನಿನ ಪರಭಾರೆ ನಿಷೇಧ ಅವಧಿ ಮುಗಿದ ನಂತರ ಸದರಿ ಜಮೀನಿನ ಮಂಜೂರುದಾರರು / ವಾರಸ್ಸುದಾರರು ಜಮೀನು ಮಾರಾಟ ಮಾಡಲು |
| ಆ) | ಸದರಿ ಜಮೀನನ್ನು ಹಂಚಿಕೆದಾರರು ಮಾರಾಟ ಮಾಡಿಕೊಳ್ಳಬಹುದೇ; ಹಾಗಿದ್ದಲ್ಲಿ, ಸರ್ಕಾರ ವಿಧಿಸಿರುವ ಷರತ್ತುಗಳೇನು; | |
| ಇ) | ಸದರಿ ಜಮೀನನ್ನು ಪರಿಶಿಷ್ಟರಲ್ಲದವರು ಖರೀದಿಸಬೇಕಾದರೆ ಪಾಲಿಸಬೇಕಿರುವ ಷರತ್ತುಗಳೇನು; ಈ ರೀತಿಯ ಷರತ್ತುಗಳನ್ನು ವಿಧಿಸಿರಲು ಕಾರಣಗಳೇನು; | |
| ಈ) | ಸರ್ಕಾರದ ಕೆಲವು ನಿಯಮಗಳು ಪೂರ್ವಾನ್ವಯದಿಂದ ಜಾರಿಯಾಗಿರುವುದರಿಂದ ಸದರಿ ಖರೀದಿದಾರರ ವಿರುದ್ಧ ಕೋರ್ಟ್ ಗಳಲ್ಲಿ ವಿವಿಧ ರೀತಿಯ ವ್ಯಾಜ್ಯಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಖರೀದಿದಾರರಿಗೆ ಸರ್ಕಾರದಿಂದ ಯಾವ ರೀತಿಯ ನಿಯಮಾವಳಿಗಳನ್ನು ರಚಿಸಲಾಗುತ್ತದೆ? | |

| | | |
|---|---|---|
| | | ಅರ್ಜಿ ಸಲ್ಲಿಸಿದಲ್ಲಿ ಕುಟುಂಬದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಿಯಮಾನುಸಾರ ಪರಿಶೀಲಿಸಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ, 1978ರ ಕಲಂ 4(2)ರನ್ವಯ ಸರ್ಕಾರದ ಪೂರ್ವಾನುಮತಿ ನೀಡಲು ಅವಕಾಶವಿದೆ.<br><br>ಮೂಲ ಮಂಜೂರಿದಾರರು / ವಾರಸ್ಸುದಾರರು ಸರ್ಕಾರದಿಂದ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ, 1978ರ ಕಲಂ 4(2)ರಡಿ ಪೂರ್ವಾನುಮತಿ ಪಡೆದ ನಂತರ ಪರಿಶಿಷ್ಟರಲ್ಲದವರು ಸದರಿ ಜಮೀನನ್ನು ಖರೀದಿಸಬಹುದಾಗಿದೆ.<br><br>ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ, 1978ಕ್ಕೆ ತಿದ್ದುಪಡಿ ತಂದು ಕಲಂ 5(ಸಿ) ರಲ್ಲಿ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಲು ಯಾವುದೇ ಕಾಲಮಿತಿ ಇರತಕ್ಕದಲ್ಲ ಎಂದು ಹಾಗೂ ಕಲಂ 5(ಡಿ)ರಲ್ಲಿ ಈ ಪ್ರಕರಣದ ಮೇರೆಗೆ ಮೊಕದ್ದಮೆಗಳನ್ನು ನ್ಯಾಯ ನಿರ್ಣಯ ಮಾಡುವ ಎಲ್ಲಾ ಸಕ್ಷಮ ಪ್ರಾಧಿಕಾರಗಳ ಮತ್ತು ಎಲ್ಲಾ ನ್ಯಾಯಾಲಯಗಳ ಮುಂದೆ ಬಾಕಿಯಿರುವ ಎಲ್ಲಾ ಪ್ರಕರಣಗಳಿಗೆ ಅನ್ವಯವಾಗತಕ್ಕದೆಂದು ಸೇರ್ಪಡೆ ಮಾಡಲಾಗಿದೆ. |

ಸಂಖ್ಯೆ: ಆರ್‌ಡಿ 130 ಎಲ್‌ಜಿಕ್ಯೂ 2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು